**O.S. 115-15 DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 10.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ K H H, ವಕೀಲರಿಂದಃ**

27. ದಿಃ 27.09.2024 ರಂದು ನಾನು ಕೆಲವು ದಾಖಲೆಗಳನ್ನು ಹಾಜರಪಡಿಸಿದ್ದೇನೆ ಅಂದರೆ ಸರಿ. ಆ ದಾಖಲೆಗಳು ಪ್ರತಿವಾದ ಪತ್ರ ಸಲ್ಲಿಸುವಾಗ ಮತ್ತು ನನ್ನ ಮುಖ್ಯ ವಿಚಾರಣೆ ಸಲ್ಲಿಸುವಾಗ ನನ್ನ ಬಳಿ ಇದ್ದವು ಅಂದರೆ ಸರಿ. ಸದರಿ ದಾಖಲೆಗಳ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಅಂದರೆ ನೆನಪಿಲ್ಲ. ದಾಖಲೆಗಳ ಬಗ್ಗೆ ಮುಖ್ಯ ವಿಚಾರಣೆಯಲ್ಲಿ ಹೇಳದಿದ್ದರೂ ಸಹ ನೆನಪಿಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹಾಜರಪಡಿಸಿದ ದಾಖಲಗೆಳಲ್ಲಿ ಹೇಳಿಲ್ಲ ಅಂದರೆ ಸರಿಯಲ್ಲ. ದಾಖಲೆಗಳ ಬಗ್ಗೆ ಮುಖ್ಯ ವಿಚಾರಣೆಯಲ್ಲಿ ಇಲ್ಲ ಅಂದರೆ ಇಲ್ಲ. ಮುಖ್ಯ ವಿಚಾರಣೆಯನ್ನು ಕೊಟ್ಟಾಗ ಸಾಕ್ಷಿಯೂ ಈ ರೀತಿ ಉತ್ತರ ಕೊಟ್ಟಿದ್ದಾರೆ.

28. ನಾನು ಹೇಳುವ ಖರೀದಿ ಪತ್ರದ ಪ್ರಕಾರ ಖರೀದಿ ಹಣವನ್ನು ಪಕ್ಷಗಾರರಿಗೆ ಕೊಟ್ಟಿದ್ದೇನೆ ಅಂತಾ ಹೇಳಿದ್ದೇನೆ. ಖರೀದಿ ಪತ್ರದ ಪ್ರಕಾರ ನಾವು ಹಣ ಕೊಟ್ಟಿಲ್ಲ ಅಂತಾ ದಿಃ 27.09.2024 ರ ದಾಖಲೆಗಳಲ್ಲಿ ಹೇಳುತ್ತದೆ ಅಂದರೆ, ಖರೀದಿ ಪತ್ರ ಹಾಗೂ ಬ್ಯಾಂಕ ಸ್ಟೇಟಮೆಂಟದಲ್ಲಿದೆ ಎಂದು ಹೇಳುತ್ತಾರೆ. ನಿಡಿ.7 ರಿಂದ 9 ರಲ್ಲಿ ಒಬ್ಬ ಸಾಕ್ಷಿ ಇದ್ದಾರೆ. ಅವರ ಹೆಸರು ಜಿ ಎಸ್ ಅಣವೇಕರ. ಖರೀದಿ ಪತ್ರದಲ್ಲಿ ಇದೇ ವ್ಯಕ್ತಿ ಸಾಕ್ಷಿದಾರರು ಅಂದರೆ ಸರಿ.

29. ನಾವು ಗಜಾನನ ಅಣವೇಕರ ರವರ ಜೊತೆಗೆ ಮಿಲಾಪಿಯಾಗಿ ನಾವು ಹೇಳುವ ಖರೀದಿ ಪತ್ರಗಳನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಆ ಕಾರಣದಿಂದ ನಮ್ಮ ಹಾಗೂ ವಾದಿಗಳ ನಡುವೆ ತಂಟೆ-ತಕರಾರು ನಡೆಯುತ್ತಾ ಇತ್ತು ಅಂದರೆ ಸರಿಯಲ್ಲ. ಚಲವಾದಿ ಅಂತಾ ಇನ್ಸಪೆಕ್ಟರ, ಹಳೇಹುಬ್ಬಳ್ಳಿಯಲ್ಲಿ ಠಾಣೆಯಲ್ಲಿದ್ದರು ಅಂದರೆ ನನಗೆ ನೆನಪಿಲ್ಲ. ಸದರಿ ಇನ್ಸಪೆಕ್ಟರವರ ಮೂಲಕ ವಾದಿಗಳು ಹಾಗೂ ಪ್ರತಿವಾದಿ 1 ಮತ್ತು 2 ರವರನ್ನು ನಾವು ಹಾಗೂ ಗಜಾನನ ಅಣವೇಕರ ರವರನ್ನು ಕರೆಸಿ ನಮ್ಮ ತಂಟೆಯನ್ನು ಬಗೆಹರಿಸಿಕೊಳ್ಳಲು ಪ್ರಯತ್ನ ಮಾಡಿದ್ದೆವು ಅಂದರೆ ಸರಿಯಲ್ಲ.

**O.S. 115-15** **DW-1**

ಚಲವಾದಿ ಇನ್ಸಪೆಕ್ಟರ ಸಹಾಯದಿಂದ ನಾನು ಹಾಗೂ ಗಜಾನನ ಅಣವೇಕರ ರವರ ಜೊತೆ ಸೇರಿ ನಿಡಿ.7 ರಿಂದ 9 ಗಳನ್ನು ಬರೆಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಆ ಕಾರಣದಿಂದ ಸದರಿ ದಾವೆ ಆಸ್ತಿಗಳಲ್ಲಿ ವಾದಿಗಳು, ಪ್ರತಿವಾದಿ 1 ಹಾಗೂ 2 ರವರು ಕಬ್ಜೆಯಲ್ಲಿದ್ದಾರೆ, ನಾವು ಇಲ್ಲ ಅಂದರೆ ಸರಿಯಲ್ಲ. ನಾವು, ಗಜಾನನ ಅಣವೇಕರ ರವರು ಸೇರಿ ವಾದಿಗಳು ಹಾಗೂ ಪ್ರತಿವಾದಿ 1 ಮತ್ತು 2 ರವರಿಗೆ ಮೋಸ ಮಾಡಿ ಖರೀದಿ ಪತ್ರ ಬರೆಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಖುರ್ಷಿದ್ ಕಲಘಟಗಿ ರವರ ಕೇಸನ್ನು ಬಗೆಹರಿಸುತ್ತೇವೆ ಅಂತಾ ಹೇಳಿ, ಈ ರೀತಿ ಖರೀದಿ ಪತ್ರ ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.